**Recommendations of the Miras Committee for the regular payment of Miras to Thotis and Talaris.**

* *Q.*—95. **Sri Govinda Das** (Hassan District—Depressed Class).—

Will the Government be pleased to state:—

(*a*) when the *Miras* Committee was appointed to suggest ways and means for the regular payment of *miras* to *Thotis* and *Thalvars* in the State;

(*b*) the recommendations made by the committee for regular issue of the *miras* to *Thotis* and *Thalvars*;

(*c*) whether those recommendations have been accepted by the Government;

(*d*) if so, the steps taken by them for the regular payment of *miras*?

*A.*—**The Hon'ble Sri H. SIDDAIYA** (Minister for Revenue and Excise).—

(*a*) In February 1943.

(*b*) (1) A rule may be added to ensure that the minor village servants are not unnecessarily called away on other work during the cultivation season to enable them to attend to the cultivation of their inam lands.

(2) Suitable publicity may be given regarding the duties to be performed by these minor village servants in all villages in order to disabuse the raiyats of the idea that this class of servants is not useful to the village community.

(3) Provision should be made for the grant of suitable lands in exchange up to 50 per cent in excess of the extent of inam lands originally assigned on the same tenure whenever the local officers are satisfied after inspection that the existing service inam lands assigned for these offices are not fit for cultivation.

(4) In cases where the existing rates of *miras* are found to be inadequate in any village, lands on ordinary tenure may be granted liberally under the Government Order of 5th October 1940, the lands so granted being treated as part of emoluments to be enjoyed by the officiators alone and shall not be liable to be transferred, partitioned or encumbered in any manner whatsoever.

(5) A separate *mirasi takta* may be opened in every village for each class of village servants to watch the progress of recovery of miras and strict enforcement in cases of default, the Patel and the Shanbhog being held responsible for its prompt and satisfactory recovery.

(6) In cases of default, the village servants should get the actual quantity of agricultural produce or its equivalent in cash instead of restricting the maximum quantity as equivalent to one anna in the rupee of assessment under the present rules.

(7) Section 12 of the Village Offices Act may be amended to provide for compulsory recovery of *miras* irrespective of the year for which it is due provided the claim is made within three years.

(8) The present system of payment of *miras* is quite suitable and the introduction of cash payment is neither necessary nor desirable, but the position may be reviewed at the end of five years.

(9) It is not necessary to disturb the present arrangement of village servants in any village, but in cases where new appointments are to be made in villages where none exists there should be both a Thoti and a Thalari for every maidan village irrespective of the population.

(10) Grouping of villages in the Malnad is not practicable, nor is it necessary to have a Thoti or a Thalari for every malnad village; but for villages with a population of 300 and over, the services of either a Thoti or Thalari may be given who may be remunerated in accordance with the rates of *miras* fixed in the rules under the Village Offices Act.

(11) Section 12 of the Village Offices Act and Clause (vii) of Rule 79 of the Rules issued thereunder may be suitably amended as indicated in paragraph VI-12 of the Report.

(12) As the Thalaris are part of the Village Police Organisation, they may be provided with some kind of uniform at Government cost.

(*c*) Yes.

(THE HON'BLE SRI H. SIDDAIYA).

(*d*) The Jamabandi officers have been instructed to promptly give effect to the recommendations approved by Government, to have the Miras Takhtas written up and scrutinised during Jamabandi, to enquire into complaints of non-payment of *miras*, and see that the payment of *miras* is made regularly.

ಶ್ರೀ ಗೋವಿಂದದಾಸ್‌ರವರು.— ಜಮಾಬಂದಿ ಆಫೀಸರಿಂದ ತೋಟ ತಳವಾರರಿಗೆ ಸರಿಯಾಗಿ ಮಿರಾಸೆ ಸಲ್ಲುತ್ತಿದೆಯೆಂದು ವರದಿ ಬಂದಿದೆಯೆ ?

**ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕೊಡುತ್ತಿಲ್ಲ ವೆಂದು ದೂರು ಬಂದಿಲ್ಲ. ಆದ್ದರಿಂದ ಕೊಡುತ್ತಿದ್ದಾರೆಂದೇ ಹೇಳಬೇಕಾಗುತ್ತದೆ.

ಶ್ರೀ ಗೋವಿಂದದಾಸ್‌ರವರು.-ಮಿರಾಸೆ ಸರಿಯಾಗಿ ಸಿಕ್ಕುತ್ತಿಲ್ಲವೆಂದು ಕೇಳುಗಳು ದಾಖಲಾಗಿವೆಯೆ ? ಆಗಿದ್ದರೆ ಎಲ್ಲ ಆಗಿವೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ನೋಟೀಸ್.

ಶ್ರೀ ಗೋವಿಂದದಾಸ್‌ರವರು.—ಇಹಾವಭಾವದ ಕಾಲದಲ್ಲಿ ಮಿರಾಸೆ ಕೊಡಲು ರೈತರಿಗೆ ತುಂಬಾ ಕಷ್ಟ ವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದು ನಿಮ್ಮ ಅಭಿಪ್ರಾಯ.

ಶ್ರೀ ಗೋವಿಂದದಾಸ್‌ರವರು.—ತೋಟ ತಳವಾರರಿಗೆ ಸೇಕಡ ಒಂದು ಭಾಗ ಕೂಡ ಮಿರಾಸೆಯಿಂದ ಸಹಾಯವಾಗುತ್ತಿಲ್ಲವೆಂಬುದನ್ನು ಒಪ್ಪುತ್ತೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಏನೂ ಸಹಾಯವಾಗುತ್ತಿಲ್ಲವೆಂಬುದನ್ನು ಒಪ್ಪುವುದಕ್ಕಾಗುವುದಿಲ್ಲ.

ಶ್ರೀ ಗೋವಿಂದದಾಸ್‌ರವರು.—ಮದ್ರಾಸು ಮತ್ತು ಇತರ ಕೆಲವು ಪ್ರಾಂತಗಳಲ್ಲಿ ಅವರಿಗೆ ಸುಭಾವನೆ ರೂಪದಲ್ಲಿ ಕೊಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕೆಲವು ಕಡೆ ಆ ರೀತಿಯಿದೆಯೆಂಬುದು ಗೊತ್ತಿದೆ.

ಶ್ರೀ ಗೋವಿಂದದಾಸ್‌ರವರು.—ಅದೇ ನೀತಿಯನ್ನು ಇಲ್ಲೂ ಅನುಸರಿಸಬಾರದೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದು ಬಹಳ ಕಷ್ಟವಾದ ಪ್ರಶ್ನೆ.

ಶ್ರೀ ಗೋವಿಂದದಾಸ್‌ರವರು.—ಇದಕ್ಕೆ ಸಂಬಂಧ ಪಟ್ಟ ಸಮಿತಿಯವರು ತಮ್ಮ ವರದಿಯಲ್ಲಿ ರೂಪಾಯಿಗೆ ಒಂದಾಣೆಯಿಂತೆ ಕೊಡಬಹುದೆಂದು ಹೇಳಿದ್ದಾರೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದನ್ನು ಉತ್ತರದಲ್ಲೇ ಹೇಳಿದೆ.

ಶ್ರೀ ಗೋವಿಂದದಾಸ್‌ರವರು.—ಅವರಿಗೆ ದಿನಸಿಗೆ ಬದಲಾಗಿ ರೂಪಾಯಿಗೆ ಒಂದಾಣೆಯಂತೆ ಸಂಭಾವನೆ ಕೊಡುವುದು ಸಾಧ್ಯವೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದು ಅಭಿಪ್ರಾಯದ ವಿಚಾರ.

ಶ್ರೀ ಗೋವಿಂದದಾಸ್‌ರವರು.—ಪಟೇರ್ ಶ್ಯಾನುಭೋಗರಿಗೆ ಸೇಕಡ 20ರಷ್ಟು ಪೋಟಗೆ ಹೆಚ್ಚುಮಾಡಿದಾಗ ತೋಟ ತಳವಾರರಿಗೆ ರಿಯಾಯಿತಿ ತೋರಿಸಿದಿರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದು ಈ ಪ್ರಶ್ನೆಗೆ ಸಂಬಂಧಪಟ್ಟಿಲ್ಲ.

ರಾಜಮಂತ್ರಪ್ರವೀಣ ಎಚ್. ಬಿ. ಗುಂಡಪ್ಪಗೌಡರು (ಹಾಸನ ಜಿಲ್ಲೆ).—ತೋಟ ತಳವಾರರು ಸರ್ಕಾರಿ ಕೆಲಸ ತಾನೆ ಮಾಡುವುದು ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಸ್ವಂತ ಮತ್ತು ಸರ್ಕಾರಿ ಕೆಲಸ.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಸ್ವಂತ ಕೆಲಸ ಮಾಡುವುದಕ್ಕೆ ರೈತರೇಕೆ ಹಣ ಕೊಡಬೇಕು ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದು ದೊಡ್ಡ ಪ್ರಶ್ನೆಯಾದ್ದರಿಂದ ಉತ್ತರ ಹೇಳುವುದಕ್ಕೆ ಕಾಲಾವಕಾಶಬೇಕು.

ಶ್ರೀ ಎಚ್. ಬಿ. ಗುಂಡಪ್ಪಗೌಡರು.—ಮಿರಾಸೆಯನ್ನು ಒಂದು ಎಕರೆಗೆ ಮೂರು ಸೇರು ಕೊಡಬೇಕೆಂದು ಗೊತ್ತುಮಾಡಿದ್ದೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಹೌದು.

ಶ್ರೀ ಎಚ್. ಬಿ. ಗುಂಜಪ್ಪಗೌಡರು.—ಹಾಗಾದರೆ ಹಳ್ಳಿಯಲ್ಲಿ ಅವರು ದೊಡ್ಡ ಹಣವಂತರಾಗುತ್ತಾರೆಂಬುದು ಗಮನಕ್ಕೆ ಬಂದಿದೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ರೆಕ್ಕ ಹಾಕಿದರೆ ಗೊತ್ತಾಗುತ್ತದೆ.

ನುಷೀರ್-ಉಲ್-ಮುಲ್ಕ್ ಜೆ. ಮಹಮದ್ ಇಮಾಂರವರು (ಚಿತ್ರದುರ್ಗ ಮತ್ತು ತುಮಕೂರು-ಮುಸ್ಲಿಂ).—ಸದ್ಯಕ್ಕೆ ಧಾನ್ಯದ ಬದಲು ಎಕರೆಗೆ ಒಂದೆರಡಾಣೆಯಂತೆ ನಿಗದಿ ಮಾಡುತ್ತೀರಾ ? ಎಕರೆಗೆ ಮೂರು ಸೇರು ಕೊಡುವುದಕ್ಕೆ ಬದಲು ಈಗ ಧಾರಣೆ ಹೆಚ್ಚಿರುವುದರಿಂದ ಎಕರೆಗೆ ಇಷ್ಟು ಎಂದು ಸಂಭಾವನೆ ಕೊಡುವುದು ಒಳ್ಳೆಯದಲ್ಲವೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಸಮಿತಿಯ ನಲಹೆ ಮತ್ತು ಸರ್ಕಾರಿ ಆರ್ಡರ್ ಪ್ರಕಾರ ಅದನ್ನು ಐದು ವರ್ಷಗಳ ನಂತರ ಯೋಚನೆಮಾಡಬೇಕು. 1947ರಲ್ಲಿ ಆರ್ಡರಾಗಿದೆ.

ಶ್ರೀ ಎರ್. ಎಚ್. ತಿಮ್ಮಾಬೋಯಿಯವರು (ಚಿಕ್ಕ ಮಗಳೂರು ಜಿಲ್ಲೆ-ನಿಮ್ನ ಪಂಗಡ).—ತೋಟ ತಳವಾರಿಗಳು ಸರ್ಕಾರಿ ನೌಕರರೇ ಆಗಿರುವುದರಿಂದ ಸರ್ಕಾರದವರು ಜಮೀನುದಾರರಿಂದ ವಸೂಲುಮಾಡತಕ್ಕ ಕಂದಾಯದಲ್ಲಿ ಒಂದು ಭಾಗವನ್ನು ಇವರಿಗೇಕೆ ಕೊಡಬಾರದು ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದು ಯೋಚನೆಮಾಡಬೇಕಾದ ವಿಚಾರ.

ಶ್ರೀ ಎರ್. ಎಚ್. ತಿಮ್ಮಾಬೋಯಿಯವರು.—ಹಾಗೆ ಮಾಡುವುದು ಅಗತ್ಯವಲ್ಲವೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದು ಅಭಿಪ್ರಾಯ.

ಶ್ರೀ ಎಂ. ಮಾದಯ್ಯನವರು (ಮೈಸೂರು ಜಿಲ್ಲೆ-ನಿಮ್ನ ಪಂಗಡ).—ಗ್ರಾಮಾಂತರಗಳಲ್ಲಿ ತೋಟ ತಳಾರಿಗಳಿಗೆ ಸರಿಯಾಗಿ ಮಿರಾಸೆ ಸಲ್ಲುತ್ತಿದೆಯೇ ಇಲ್ಲವೇ ಎಂಬ ಬಗ್ಗೆ ಮೂರು ತಿಂಗಳಿಗೊಮ್ಮೆ ವರದಿಯನ್ನೇನಾದರೂ ತರಿಸುತ್ತೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ರೆವಿನ್ಯೂ ಕಮೀಷನರವರು ಅದನ್ನು ವಿಚಾರಿಸುತ್ತಾರೆ. ಸಲ್ಲುತ್ತಿಲ್ಲವೆಂದು ದೂರು ಬರುವ ಸಂದರ್ಭಗಳಲ್ಲಿ ಸಂಬಂಧಪಟ್ಟ ಅಧಿಕಾರಿಗಳು ಕೊಡಿಸುತ್ತಾರೆ.

ಶ್ರೀ ಎಂ. ಮಾದಯ್ಯನವರು.—ಜಮಾಬಂದಿಯಾಗ ತಕ್ಕ ಕಾಲದಲ್ಲಿ ಅಧಿಕಾರಿಗಳು ವಿಚಾರಿಸಿ ಮಿರಾಸೆ ಸಲ್ಲುವಂತೆ ಮಾಡಬೇಕೆಂದು ತಿಳಿಸಿರುವುದಾಗಿ ಹೇಳಿದ್ದೀರಿ. ಹಾಗೆ ಕೊಡಿಸುತ್ತಿದ್ದಾರೆಯೇ ಇಲ್ಲವೆ ಎಂಬುದಕ್ಕೆ ವರದಿಯನ್ನು ತರಿಸುತ್ತೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಸರಿಯಾಗಿ ನಲ್ಲುತ್ತಿರುವುದರಿಂದ ಹಾಗೆ ವರದಿ ತರಿಸುವುದು ಅನಾವಶ್ಯಕ.

ಶ್ರೀ ಎಂ. ಮಾದ್ದಯ್ಯನವರು.—ಸರಿಯಾಗಿ ನಲ್ಲುತ್ತಿದೆಯೆಂದು ಯಾವ ಆಧಾರದ ಮೇಲೆ ಹೇಳುತ್ತೀರಿ ?

ಮಾನ್ಯ ಶ್ರೀ. ಎಚ್. ಸಿದ್ದಯ್ಯನವರು.—ಯಾವ ದೂರುಗಳೂ ಇಲ್ಲದಿದ್ದರೆ ಸರಿಯಾಗಿ ನಡೆಯುತ್ತಿದೆಯೆಂದು ಅರ್ಥ.

ಶ್ರೀ ಎಂ. ಮಾದಯ್ಯನವರು.—(ಎ) ಭಾಗಕ್ಕೆ ಉತ್ತರವಾಗಿ 1943ರಲ್ಲಿ ಎಂದು ತಿಳಿಸಲಾಗಿದೆ. ಅಲ್ಲದೆ ಐದು ವರ್ಷವಾದ ಮೇಲೆ ಪುನರ್ವಿಮರ್ಶೆ ಮಾಡಬೇಕೆಂದೂ ಸೂಚಿಸಿದ್ದಾರೆ. ಈಗ 1951ನೆಯ ಇಸವಿ. ಐದು ವರ್ಷವಾದ ಮೇಲೆ ಪುನರ್ವಿಮರ್ಶೆಮಾಡಿದ್ದೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—1943ರಲ್ಲಿ ನಮಿತಿ ನೇಮಕಮಾಡಿದ್ದು, ಅಷ್ಟೆ.

ಶ್ರೀ ಎಂ. ಮಾದಯ್ಯನವರು.—ಹಾಗಾದರೆ ವರದಿ ಯಾವಾಗ ಮಾಡಿದ್ದು ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—1945ನೆಯ ಇಸವಿಯಲ್ಲಿ.

ಶ್ರೀ ಎಂ. ಮಾದಯ್ಯನವರು.—ಹಾಗೂ ಆರುವರ್ಷವಾಯಿತು. ಅವರ ವರದಿಯಲ್ಲಿ "The present system of payment of miras is quite suitable and the introduction of cash payment is neither necessary nor desirable, but the position may be reviewed at the end of five years" ಎಂದು ಹೇಳಿದ್ದಾರೆ ; ಇದರಮೇಲೆ ಸರ್ಕಾರದವರು ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇನ್ನೂ ಐದು ವರ್ಷವಾಗಿಲ್ಲ.

ಶ್ರೀ ಎಂ. ಮಾದಯ್ಯನವರು.—ಧಾನ್ಯವನ್ನು ಕೊಡದಿದ್ದ ಪಕ್ಷದಲ್ಲಿ ಅದಕ್ಕೆ ಬದಲಾಗಿ ಹಣವನ್ನು ಸಲ್ಲಿಸಬಹುದೆಂದು ಹೇಳಿದೆ ; ಧಾನ್ಯಕ್ಕೆ ಬದಲಾಗಿ ಹಣವನ್ನೇ ವಸೂಲುಮಾಡಿಕೊಡಲು ಯೋಚಿಸುತ್ತೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇನ್ನುಮೇಲೆ ಯೋಚನೆಮಾಡಬೇಕಾಗಿದೆ.

ಶ್ರೀ ಎಂ. ಮಾದಯ್ಯನವರು.—ಇದು ನಲ್ಲುವಂತೆ ನೋಡಿಕೊಳ್ಳುವುದು ಗ್ರಾಮಾಧಿಕಾರಿಗಳ ಜವಾಬ್ದಾರಿ. "A separate mirasi takta may be opened in every village for each class of village servants to watch the progress of recovery of miras and strict enforcement in cases of default, the Patel and Shanbhog being held responsible for its prompt and satisfactory recovery" ಎಂದು ತಿಳಿಸಲಾಗಿದೆ. ಅವರ ಜವಾಬ್ದಾರಿ ಏನು ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಪಾವತಿಯಾಗುತ್ತಿದೆಯೇ ಇಲ್ಲವೆ ಎಂಬುದನ್ನು ನೋಡಿಕೊಂಡು, ಪಾವತಿಯಾಗದಿದ್ದರೆ ಕೊಡಿಸಿಕೊಡುವುದು ಅವರ ಕರ್ತವ್ಯ, ಜವಾಬ್ದಾರಿ.

ಶ್ರೀ ಎಂ. ಮಾದಯ್ಯನವರು.—ರೈತರು ಕೊಡದೇ ಇದ್ದ ಪಕ್ಷದಲ್ಲ, ಗ್ರಾಮಾಧಿಕಾರಿಗಳು ಕೊಡಿಸದೇ ಯಿದ್ದ ಪಕ್ಷದಲ್ಲ ಅವರ ಕೋಟಗೆಯನ್ನು ಎಲ್ಲನಬೇಕೆಂದು ನಿಬಂಧನೆ ಇದೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಈ ಪ್ರಶ್ನೆಯೇ ಉದ್ಭವವಾಗುವುದಿಲ್ಲ. ಇದು ಗ್ರಾಮಾಧಿಕಾರಿಗಳ ಕರ್ತವ್ಯ, ಅವರು ಮಾಡುತ್ತಾರೆ.

ಶ್ರೀ ಎಂ. ಮಾದಯ್ಯನವರು.—ಜಮಾಬಂದಿಯ ಕಾಲದಲ್ಲಿ ಫೋಟಗೆ ಕೊಟ್ಟಿಲ್ಲವೆಂಬುದಾಗಿ ಅಧಿಕಾರಿಗಳು ವರದಿ ಮಾಡಿದರೆ ಅಂತಹ ಸಂದರ್ಭದಲ್ಲಿ ಗ್ರಾಮಾಧಿಕಾರಿಗಳ ಫೋಟಗೆಯನ್ನು ಕೊಡಬಾರದೆಂದು ನಿಯಮದಲ್ಲಿದೆಯೆ ?

The Hon'ble Sri H. SIDDAIYA.—I want notice for that.

ಶ್ರೀ ಎ. ಜಿ. ಬಂದೀಗೌಡರು (ಮಂಡ್ಯ ಜಿಲ್ಲೆ).—ಈಚೆಗೆ ನೇಮಕವಾಗಿದ್ದ ಭೂಕಂದಾಯ ಸುಧಾರಣಾ ನಮಿತಿಯವರು ಈ ವಿಚಾರದಲ್ಲಿ ಏನಾದರೂ ಶಿಫಾರಸು ಮಾಡಿದ್ದಾರೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಮಾಡಿದ್ದಾರೆ.

ಶ್ರೀ ಎ. ಜಿ. ಬಂದೀಗೌಡರು.—ಅದನ್ನು ಪರ್ಯಾಲೋಚನೆ ಮಾಡುತ್ತೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಮಾಡುತ್ತೇವೆ.

ಶ್ರೀ ಎಚ್. ಸಿದ್ದವೀರಪ್ಪನವರು (ಚಿತ್ರದುರ್ಗ ಜಿಲ್ಲೆ).—ಈಗಿನ ಕಾಲದಲ್ಲಿ ಮಿರಾಸೆ ಕೊಡಿಸುವುದು ಸಾಧ್ಯವೇ ಇಲ್ಲ ; ಖರ್ಚು ಹೆಚ್ಚಾಗುತ್ತದೆ, ರೈತರು ಕೊಡುವುದಕ್ಕಾಗುವುದಿಲ್ಲ ; ಶ್ರೀ ಗುಂಡಪ್ಪಗೌಡರು ಹೇಳಿದಹಾಗೆ ಇದು ಅಮರ್ದಾರರ ನಂಬಳದಷ್ಟಾಗುತ್ತದೆ, ಧಾನ್ಯಗಳ ಧಾರಣೆ ಹೆಚ್ಚಾಗಿರುವುದರಿಂದ ಎಂಬುದು ಗೊತ್ತಿದೆಯೆ ! Is it not necessary to review the entire policy now ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಸಾಮಾನ್ಯವಾಗಿ ಕಷ್ಟವಿರುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಕಷ್ಟವಾಗಿದೆಯೆಂದು ಈಗ ಹೇಳುತ್ತಿರುವುದರಿಂದ ಇದನ್ನು ಯೋಚನೆ ಮಾಡುತ್ತೇವೆ.

ಶ್ರೀ ಎಂ. ಸಿ. ವೆಂಕಟೇಶ್ವರವರು (ಮಂಡ್ಯ ಜಿಲ್ಲೆ ನಿಮ್ನ ಪಂಗಡ).—ಜಮಾಬಂದಿ ಕಾಲದಲ್ಲಿ ವಸೂರಾಗಿದೆಯೇ ಇಲ್ಲವೆ ಎಂದು ವಿಚಾರಮಾಡಬೇಕೆಂದು ಮಾಡಿದ್ದಾರೆ ; ಕೀಗಿರುವಾಗ ತೋಟಿತರಾರಿಗಳಿಗೆ ಎಷ್ಟು ಮಿರಾಸೆ ನಂದಾಯವಾಗಿದೆ, ಎಷ್ಟು ಆಗಿಲ್ಲ ಎಂಬ ಬಗ್ಗೆ ವರದಿಯನ್ನು ತರಿಸಿಕೊಳ್ಳುವುದಕ್ಕಾಗುವುದಿಲ್ಲವೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಜಮಾಬಂದಿ ಕಾಲದಲ್ಲಿ ಪರಿಶೀಲನೆ ಮಾಡಿ ಇತ್ಯರ್ಥ ಮಾಡಿಸುತ್ತಿದ್ದಾರೆ.

ಶ್ರೀ ಎಂ. ಸಿ. ವೆಂಕಟೇಶ್ವರವರು.—ಅಮರ್ದಾರರಿಂದ ಜಮಾನು ಕಂದಾಯದ ಬಾಕಿಯ ವರಧಿಯನ್ನು ಹೇಗೆ ತರಿಸುತ್ತೀರೋ ಹಾಗೆಯೇ ಇದನ್ನು ತರಿಸಿಕೊಳ್ಳುವುದಕ್ಕಾಗುವುದಿಲ್ಲವೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇದನ್ನು ಯೋಚನೆ ಮಾಡುತ್ತೇವೆ.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಆ ನಮಿತಿಯ ಶಿಫಾರಸುಗಳಲ್ಲಿ 12ನೆಯದರಲ್ಲಿ "As the Talaris are part of the Village Police organisation, they may be provided with some kind of uniform at Government cost" ಎಂದಿದೆ, ಅದರಂತೆ ಮಾಡಿದ್ದೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇನ್ನೂ ಮಾಡಿಲ್ಲ.

ಶ್ರೀ ಎಸ್. ರಂಗರಾಮಯ್ಯನವರು.—ಯೂನಿಫಾರಂಗೆ ಡಿಸ್ಮೈಕ್ ಮಾಡಿದ್ದೀರಾ ! (ನಗು !)

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇಲ್ಲ.

ಶ್ರೀ ಟಿ. ಹನುಮಯ್ಯನವರು (ಚಿತ್ರದುರ್ಗ ಜಿಲ್ಲೆ—ನಿಮ್ನ ಪಂಗಡ).—ಸರಿಯಾಗಿ ಸಂದಾಯವಾಗುತ್ತಿದೆಯೆಂದಾದರೂ ವರದಿ ಬಂದಿದೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ವರದಿ ಬಂದಿಲ್ಲ.

ಶ್ರೀ ಟಿ. ಹನುಮಯ್ಯನವರು.—ಹಾಗಾದರೆ ತೋಟಿ ತಳಾರಿಗಳಿಗೆ ಮಿರಾಸ ನರಿಯಾಗಿ ನಂದಾಯವಾಗುತ್ತಿದೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ನಂದಾಯವಾಗುತ್ತಿದೆ.

ಶ್ರೀ ಟಿ. ಹನುಮಯ್ಯನವರು.—ಪ್ರತಿ ತಾಲ್ಲೂಕಿನಲ್ಲಿಯೂ ಡಿಪ್ಯಾಂಡ್, ಕರೆಕ್ಟ್ ಮತ್ತು ಬ್ಯಾರೆನ್ಸ್ ಎಷ್ಟೆಷ್ಟಿದೆಯೆಂದು ವರದಿ ತರಿಸಿದ್ದೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇಲ್ಲ.

ಶ್ರೀ ಟಿ. ಹನುಮಯ್ಯನವರು.—ಹಾಗಾದರೆ ಬರಬೇಕಾದದ್ದೆಷ್ಟು, ವಸೂರಾದುದೆಷ್ಟು, ಬಾಕಿ ಉಳಿದಿರುವುದೆಷ್ಟು, ಎಂಬುವನ್ನು ಸಭೆಗೆ ತಿಳಿಸುತ್ತೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಆಯಾ ಗ್ರಾಮದಲ್ಲಿ ಎಷ್ಟು ಎಕರೆ ಜಮೀನಿರುತ್ತದೆಯೋ ಅದರ ಮೇಲೆ ಹೋಗುತ್ತದೆ. ಇದು ಆಯಾ ತಾಲ್ಲೂಕಿನಲ್ಲಿ ಸಿಕ್ಕುತ್ತದೆ. ನಾವು ತರಿಸುವುದು ಅನಾವಶ್ಯಕ.

ಶ್ರೀ ಟಿ ಹನುಮಯ್ಯನವರು.—ನಾವು ಕೇಳುತ್ತಿರುವುದು ಸರ್ಕಾರದವರನ್ನು. ಸರ್ಕಾರದವರು ಡಿಪ್ಯಾಂಡ್, ಕರೆಕ್ಟ್ ಮತ್ತು ಬ್ಯಾಲೆನ್ಸ್ ಎಷ್ಟೆಷ್ಟಿದೆಯೆಂಬುದಕ್ಕೆ ವರದಿ ತರಿಸುವುದಿಲ್ಲವೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಸರ್ಕಾರದವರು ತರಿಸುತ್ತಿಲ್ಲ.

ಶ್ರೀ ಟಿ. ಹನುಮಯ್ಯನವರು.—ಕಾರಣವೇನು ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದು ಅನಾವಶ್ಯಕ.

ಶ್ರೀ ಟಿ. ಹನುಮಯ್ಯನವರು.—ತೋಟಿತಳಾರಿಗಳು ಮುಫತ್ತಾಗಿ ಕೆಲಸಮಾಡುತ್ತಾರೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದು ತಮ್ಮ ಅಭಿಪ್ರಾಯವಿರಬಹುದು, ಆದರೆ ಅದನ್ನು ನಾವು ಒಪ್ಪುವುದಿಲ್ಲ. ತೋಟಿ ತಳಾರಿಗಳಿಗೆಲ್ಲಾ ಇನಾಂ ಜಮೀನುಗಳನ್ನು ಕೊಟ್ಟಿದೆಯಲ್ಲದೆ ಮಿರಾಸಯನ್ನೂ ಕೊಡಲಾಗುತ್ತಿದೆ.

ಶ್ರೀ ಟಿ. ಹನುಮಯ್ಯನವರು.—ಪಟೇಲ್‌ಶಾನುಭೋಗರಿಗೂ ಇದೇ ರೀತಿ ಜಮೀನು ಕೊಟ್ಟಿಲ್ಲವೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕೊಟ್ಟಿದೆ.

ಶ್ರೀ ಟಿ. ಹನುಮಯ್ಯನವರು.—ಹಾಗಾದರೆ ಇವರು ಜಮೀನಿಗಾಗಿ ಕೆಲಸ ಮಾಡಬೇಕೆಂದು ಕಾನೂನಿನಲ್ಲಿದೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಜಮೀನಿನ ಜೊತೆಗೆ ಮಿರಾಸೆಯೂ ಇದೆ.

ಶ್ರೀ ಟಿ. ಹನುಮಯ್ಯನವರು.—ಮಿರಾಸೆಯಿಲ್ಲದೆ ಕೆಲಸ ಮಾಡಬೇಕೆಂದು ಹೇಳುತ್ತೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ನಾನು ಹಾಗೆ ಹೇಳಲಿಲ್ಲ.

ಶ್ರೀ ಟಿ. ಹನುಮಯ್ಯನವರು.—1943ನೆಯ ಇಸವಿಯಲ್ಲಿ ಮಾಡಿರುವುದೇ ಮುಂದುವರಿಯಬೇಕೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—1943ರಲ್ಲಿ ನಮಿತ ನೇಮಕವಾಯಿತು, ವರದಿ ಬಂದದ್ದು 1945ರಲ್ಲಿ. ಐದು ವರ್ಷಗಳ ಮೇಲೆ ಪುನಃ ಪರಿಶೀಲನೆಯಿಂದಿದೆ, ಈಗ ತಾನೇ ಐದು ವರ್ಷ ಆಗಿದೆ, ಮಾಡುತ್ತೇವೆ.

ಶ್ರೀ ಹನುಮಯ್ಯನವರು.—ತೋಟಿ ತಳಾರಿಗಳು ಕೆಲಸ ಮಾಡಬೇಕೆಂದು ಒತ್ತಾಯ ಮಾಡುತ್ತೀರಾ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅವರ ಕರ್ತವ್ಯವನ್ನು ಮಾಡಲೇಬೇಕು. Section 12 of the Village Offices Act ನಲ್ಲಿ ವಿಧಾಯಕವಾಗಿದೆ.

ಶ್ರೀ ಟಿ. ಹನುಮಯ್ಯನವರು.—1950ನೆಯ ಜನವರಿ 26ರಲ್ಲಿ ಹೊಸರಾಜ್ಯಾಂಗ ಜಾರಿಗೆ ಬಂದಿದೆ, ಅವರ ಪ್ರಕಾರ ಒತ್ತಾಯದಿಂದ ಕೆಲಸ ಮಾಡಿಸುವುದು ತಪ್ಪೆಂಬ ಭಾವನೆಯಲ್ಲವೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಒತ್ತಾಯವೇನೂ ಇಲ್ಲ, ಅವರ ಕೆಲಸವನ್ನು ಅವರೇ ಮಾಡುತ್ತಾರೆ.

ಶ್ರೀ ಟಿ. ಹನುಮಯ್ಯನವರು.—ಹಾಗಾದರೆ ತಾವು ಅವರನ್ನು ಕೆಲಸಮಾಡಲು ಕರೆಯುವುದಿಲ್ಲವೆಂದು ಭಾವಿಸೋಣವೆ ?

ಮಾನ್ಯ ಶ್ರೀ ಟಿ. ಹನುಮಯ್ಯನವರು.—ಅವರಿಗೆ ತಕ್ಕ ಪ್ರತಿಫಲವಿದೆ, ಪ್ರೋತ್ಸಾಹವಿದೆ, ಒತ್ತಾಯದ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಮಿರಾಸೆ ಬೇಕಾದರೆ ಅವರು ಕೆಲಸ ಮಾಡಬೇಕು, ತಮ್ಮ ಕರ್ತವ್ಯವನ್ನು ನಿರ್ವಹಿಸಬೇಕು.

ಶ್ರೀ ಎಚ್. ಸಿದ್ದನಂಜಪ್ಪನವರು (ಹಾಸನ ಜಿಲ್ಲೆ).—ಮಿರಾಸೆ ಪಾವತಿಯಾಗಿಲ್ಲವೆಂದು ತಮಗೆ ಯಾವುದಾದರೂ ದೂರುಗಳು ಬಂದಿವೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇಲ್ಲ.

Mr. SPEAKER.—Next question. Q. No. 114. The Hon'ble Member is not present. The subject-matter of this question has also been sufficiently discussed on an earlier question. The question may be treated as unstarred.

Next question. Q. No. 153. Sri K. Sampangi Ramiah.

---

## Constitution of Gudibanda as Pucca Taluk.

*Q.—153. Sri K. Sampangi Ramiah (Kolar District—General).—

Will the Government be pleased to state :—

(*a*) when the order was passed constituting Gudibanda as a pucca taluk ;

(*b*) whether there was an order directing that some hoblis of Goribidnur Taluk be taken away from that taluk and included in Gudibanda Taluk ;

(*c*) when the order was passed ;

(*d*) whether it was given effect to ;

(*e*) if not, why ;

(*f*) whether there was a petition presented and signed by the Representative Assembly and Legislative Council Members and other prominent people in the District praying that the Government Order be given effect to ;

(*g*) when the petition was presented ;